# ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ವಿ. ಸಂಕನೂರ ಇವರು ನಿಯಮ 330ರಡಿ ಮಂಡಿಸಿದ ಸೂಚನೆಗೆ ಉತ್ತರ

**ವಿಷಯ:** ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ WA/NO.81/2020ಗೆ ಸಂಬಂಧಿಸಿದಂತೆ ಈಗಾಗಲೇ 3 ½ ವರ್ಷಗಳ ಹಿಂದೆ ಆಗಿರುವ ಆದೇಶವನ್ನು ಸರ್ಕಾರವು ಕಾರ್ಯಗತಗೊಳಿಸಿದೆಯೇ; ಇಲ್ಲವಾದಲ್ಲಿ, ಇದು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶಕ್ಕೆ ನ್ಯಾಯಾಂಗ ನಿಂಧನೆಯಾಗಿರುವುದರಿಂದ ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

* * * * *

ಡಾ. ಲೀಲಾವತಿ.ವಿ, ನೆಫ್ರೋಲಜಿಸ್ಟ್, ಜಿಲ್ಲಾ ಆಸ್ಪತ್ರೆ, ಕೋಲಾರ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 440 ಹೆಚ್‌ಎಸ್‌ಹೆಚ್ 2013, ದಿನಾಂಕ:07.09.2013ರಲ್ಲಿ 01 ವರ್ಷ ಅವಧಿಗೆ ನೆಫ್ರೋ-ಯುರಾಲಜಿ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರು (ನೆಫ್ರೋಲಾಜಿ) ಹುದ್ದೆಗೆ ನಿಯೋಜನೆ ಮೇಲೆ ನೇಮಿಸಲಾಗಿದ್ದು, ದಿನಾಂಕ:13.09.2013ರಂದು ವರದಿ ಮಾಡಿಕೊಂಡಿರುತ್ತಾರೆ. ನಂತರ, ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 237 ಹೆಚ್‌ಎಸ್‌ಹೆಚ್ 2014, ದಿನಾಂಕ:11.09.2014ರಲ್ಲಿ ಇವರ ನಿಯೋಜನೆಯನ್ನು 04 ವರ್ಷಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 50 ಎಂಎಸ್‌ಎಫ್ 2017, ಬೆಂಗಳೂರು ದಿನಾಂಕ:08.02.2018ರಲ್ಲಿ ಆಕುಕ ಇಲಾಖೆಯ ಡಾ:ಲೀಲಾವತಿ.ವಿ, ಮತ್ತು ಡಾ: ಶ್ರೀಧರ್.ಸಿ.ಜಿ., ಹಿರಿಯ ತಜ್ಞ ವೈದ್ಯರು ಇವರುಗಳನ್ನು ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಖಾಲಿ ಇದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ವಿಲೀನಗೊಳಿಸಿ ಆದೇಶಿಸಲಾಗಿರುತ್ತದೆ.

ನೆಫ್ರೋ-ಯುರಾಲಜಿ ಸಂಸ್ಥೆಯು ದಿನಾಂಕ:14.06.2018 ರಂದು ಪ್ರಚುರಪಡಿಸಿದ ಗ್ರೂಪ್-ಎ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಡಾ:ಶ್ರೀಧರ್ ಸಿ.ಜಿ., ರವರಿಗಿಂತ ಕಿರಿಯ ಸ್ಥಾನದಲ್ಲಿ ಪರಿಗಣಿಸಿದ್ದರಿಂದ, ಡಾ:ಲೀಲಾವತಿ ವಿ. ರವರು ಗೌ.ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:28543/2018 ಅನ್ನು ದಾಖಲಿಸಿ, ತಮ್ಮ ವಿಲೀನಾತಿ ಆದೇಶದಲ್ಲಿದ್ದ ಈ ಕೆಳಕಂಡ ಷರತ್ತನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

> "3. ಸದರಿಯವರ ಸೇವಾ ಜೇಷ್ಠತೆಯನ್ನು ಸದರಿ ಸಂಸ್ಥೆಯಲ್ಲಿ ವಿಲೀನಗೊಂಡ ದಿನಾಂಕದಿಂದ ಪರಿಗಣಿಸತಕ್ಕದ್ದು ಹಾಗೂ ಸದರಿಯವರು ವಿಲೀನಗೊಂಡ ಹುದ್ದೆಗಳಲ್ಲಿ ಇವರ ಜೇಷ್ಠತೆಯನ್ನು ಕಿರಿಯವರಾಗಿ ನಿಗದಿಪಡಿಸತಕ್ಕದ್ದು."

ಮುಂದುವರೆದು, ದಿನಾಂಕ:14.06.2018ರ ಜೇಷ್ಠತಾ ಪಟ್ಟಿಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ರಿಟ್ ಅರ್ಜಿ ಸಂಖ್ಯೆ:28543/2018 ರಲ್ಲಿ ಗೌ. ನ್ಯಾಯಾಲಯವು ದಿನಾಂಕ:02.01.2020ರಂದು ತೀರ್ಪು ನೀಡಿ, ರಿಟ್ ಅರ್ಜಿಯನ್ನು ವಜಾಗೊಳಿಸಿ ಅರ್ಜಿದಾರರಿಗೆ ರೂ.25,000/-ಗಳ ದಂಡ ವಿಧಿಸಿರುತ್ತದೆ.

ಈ ತೀರ್ಪನ್ನು ಪ್ರಶ್ನಿಸಿ ಡಾ:ಲೀಲಾವತಿ ವಿ. ರವರು ಗೌ. ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ:81/2020 ಅನ್ನು ದಾಖಲಿಸಿದ್ದು, ಗೌ. ನ್ಯಾಯಾಲಯವು ದಿನಾಂಕ:28.02.2020 ರಂದು ಈ ಕೆಳಗಿನಂತೆ ತೀರ್ಪು ನೀಡಿರುತ್ತದೆ.

(i) The impugned order dated 8th February 2018 (Annexure-A to W.P. No.28543 / 2018) is hereby set aside only in relation to the appellant. The said order will continue to remain in force as far as the fourth respondent is concerned;

(ii) As Annexure-C is the communication issued on the basis of the representation made by the petitioner on the basis of the order dated 8th February 2018, the same does not survive;

(iii) In view of the aforesaid direction, the impugned order is formally set aside;

(iv) We make it clear that as the appellant has taken the risk of getting the order of 8th February 2018 set aside at her instance, the State Government while considering the prayer of the appellant for absorption shall not consider the affidavit filed by the appellant on 6th December 2017;

(v) We direct the State government to consider the case of the appellant for absorption in the cadre of Assistant Professor in accordance with law as expeditiously as possible. The decision shall be taken by the State Government not later than one month from today which shall be communicated to the appellant;

(vi) We make it clear that we made no adjudication on the rival contentions of the parties;

(vii) The appeal is disposed of on the above terms;

(viii) The pending interlocutory application does not survive for consideration and stands disposed of."

ಮೇಲಿನಂತೆ ಗೌ.ನ್ಯಾಯಾಲಯವು ನೀಡಿದ ಆದೇಶದನ್ವಯ ಕ್ರಮವಹಿಸುವ ಕುರಿತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿ, ಕಾನೂನು ಇಲಾಖೆಯು, ಡಾ: ಲೀಲಾವತಿ ಇವರನ್ನು ವಿಲೀನಾತಿಗೊಳಿಸಲು ಸಾರ್ವಜನಿಕ ಹಿತದೃಷ್ಟಿಯಿಂದ ಕ್ರಮವಹಿಸಲಾಗುತ್ತಿದೆಯೇ ಅಥವಾ ಸದರಿಯವರ ವಿನಂತಿಕೋರಿಕೆಯ ಮೇರೆಗೆ ಕ್ರಮವಹಿಸಲಾಗುತ್ತಿದೆಯೋ ಎಂಬುದರ ಆಧಾರದ ಮೇಲೆ ಕ್ರಮವಹಿಸಬೇಕಾಗುತ್ತದೆ ಎಂದು ತಿಳಿಸುತ್ತಾ ಡಾ: ಲೀಲಾವತಿ ಇವರ ವಿಲೀನಾತಿ ಆದೇಶವನ್ನು ಹೊಸದಾಗಿ ಹೊರಡಿಸುವಂತೆ, ಇದರಿಂದ ನಾಲ್ಕನೇ ಎದುರುದಾರರರಿಗೆ (ಡಾ:ಶ್ರೀಧರ್ ಸಿ.ಜಿ) ಇವರ ಸೇವಾ ಹಿರಿತನಕ್ಕೆ ಧಕ್ಕೆಯಾಗದಂತೆ, K.C.S (General Recruitment) Rules 1977 ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರನ್ವಯ ಹೊಸದಾಗಿ ವಿಲೀನಾತಿ ಆದೇಶವನ್ನು ಹೊರಡಿಸಬೇಕಾಗುತ್ತದೆ ಎಂದು ಅಭಿಪ್ರಾಯ ನೀಡಿರುತ್ತದೆ.

ನಂತರ, ಸರ್ಕಾರದ ಪತ್ರ ದಿ:07.10.2020ರಲ್ಲಿ ಡಾ:ಲೀಲಾವತಿರವರನ್ನು ಸಂಸ್ಥೆಯ ಸೇವೆಯಲ್ಲಿ ವಿಲೀನಗೊಳಿಸಿ ಜೇಷ್ಠತೆಯನ್ನು ನಿಗದಿಪಡಿಸುವ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಅದರನ್ವಯ, ವಿಷಯವನ್ನು ದಿನಾಂಕ:24.01.2022 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಸಭೆಯ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಯವರು, ನಿಯಮಾನುಸಾರ ಸದರಿ ವೈದ್ಯರ ಸೇವಾ ಜೇಷ್ಠತೆಯನ್ನು ವಿಲೀನಾತಿ ಹೊಂದಿದ ದಿನಾಂಕದಿಂದ Retrospective ಆಗಿ ಪರಿಗಣಿಸಲು ಅವಕಾಶವಿಲ್ಲದೇ ಇರುವುದರಿಂದ ಈ ಬಗ್ಗೆ ಅಸ್ತಿತ್ವದಲ್ಲಿರುವ ನಿಯಮಗಳ (Existing Rules) ಪ್ರಕಾರ ಕ್ರಮವಹಿಸುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಸೂಚಿಸಿದ್ದರು.

ಅದರನ್ವಯ, ಸೂಕ್ತ ನಿರ್ಧಾರಕ್ಕಾಗಿ ಕಡತವನ್ನು ಮಾನ್ಯ ಇಲಾಖಾ ಸಚಿವರಿಗೆ ಸಲ್ಲಿಸಲಾಗಿ, ಮಾನ್ಯ ಇಲಾಖಾ ಸಚಿವರು ಈ ಕೆಳಕಂಡಂತೆ ಕಡತದಲ್ಲಿ ಷರಾ ದಾಖಲಿಸಿರುತ್ತಾರೆ.

> **"Since, the absorption is confirmed she may be continued in INU. As for as seniority is concerned existing bylaw should be applied."**

ಮಾನ್ಯ ಇಲಾಖಾ ಸಚಿವರ ಮೇಲಿನ ಟಿಪ್ಪಣಿಯನ್ನು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿದ್ದು, ಮೇಲಿನ ಅಭಿಪ್ರಾಯದನ್ವಯ, ಸರ್ಕಾರದ ಕಾರ್ಯದರ್ಶಿಯವರು ಈ

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿ, ಕಡತವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ದಿನಾಂಕ:04.08.2022ರಂದು ಸಲ್ಲಿಸಿರುತ್ತಾರೆ.

ನಂತರ, ದಿನಾಂಕ 16.08.2022 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿರುತ್ತದೆ.

> "ಡಾ.ಶ್ರೀಧರ್ ಸಿ.ಜಿ. ಇವರಿಗಿಂತಲೂ ಮೊದಲೇ ಡಾ. ವಿ.ಲೀಲಾವತಿ, ಇವರು ನೆಫ್ರೋ-ಯುರಾಲಜಿ ಸಂಸ್ಥೆಯ ಸಹ ಪ್ರಾಧ್ಯಾಪಕರ ಹುದ್ದೆಗೆ ಅಗತ್ಯವಿರುವ ಸೂಪರ್ ಸ್ಪೆಷಾಲಿಟಿ (ಡಿ.ಎಂ. ನೆಫ್ರೊಲಜಿ) ವಿದ್ಯಾರ್ಹತೆಯನ್ನು ಹೊಂದಿ, ಡಾ. ಶ್ರೀಧರ್ ಸಿ.ಜಿ., ಇವರಿಗಿಂತಲೂ ಮೊದಲೇ ನೆಫ್ರೊ-ಯುರಾಲಜಿ ಸಂಸ್ಥೆಯಲ್ಲಿ ನಿಯೋಜನೆ ಮೇರೆಗೆ ಸೇವೆ ಸಲ್ಲಿಸಿರುವುದರಿಂದ, ಆರೋಗ್ಯ ಮತ್ತು ಕುಟುಂಬ ಇಲ್ಯಾಣ ಇಲಾಖೆಯ ಸೇವಾ ಜೇಷ್ಠತೆಯನ್ನು ಪರಿಗಣಿಸಿದೇ, ನಿಯೋಜನೆ ಮೇರೆಗೆ ನೇಮಕಗೊಂಡಿರುವುದನ್ನು ಪರಿಗಣಿಸಿ, ಡಾ. ವಿ.ಲೀಲಾವತಿ ಇವರನ್ನು ಸೇವಾ ಜೇಷ್ಠತೆಯಲ್ಲಿ ಹಿರಿಯರನ್ನಾಗಿ, ಡಾ. ಶ್ರೀಧರ್ ಸಿ.ಜಿ., ಇವರ್ನು ಕಿರಿಯವನ್ನಾಗಿ ಪರಿಗಣಿಸಲು ತೀರ್ಮಾನಿಸಲಾಯಿತು."

ದಿನಾಂಕ 16.08.2022ರ ಆಡಳಿತ ಮಂಡಳಿ ಸಭೆಯ ನಿರ್ಣಯವನ್ನು ಅನುಷ್ಠಾನಗೊಳಿಸದಂತೆ, ಡಾ.ಶ್ರೀಧರ್‌ಸಿ.ಜಿ.ರವರು ರಿಟ್ ಅರ್ಜಿ ಸಂಖ್ಯೆ 23876/2022ನ್ನು ದಾಖಲಿಸಿದ್ದು, ಗೌ. ನ್ಯಾಯಾಲಯವು ದಿನಾಂಕ:30.11.2022 ರಂದು ನೀಡಿದ ಮಧ್ಯಂತರ ಆದೇಶದ ಉಧೃತ ಭಾಗ ಈ ಕೆಳಗಿನಂತಿದೆ:

> The petitioner shall not be reverted from the post of Associate Professor, Department of Nephrology, on the basis of resolution (Annexure-A) dated 16.08.2022.

ಈ ಆದೇಶದ ಹಿನ್ನೆಲೆಯಲ್ಲಿ, ದಿನಾಂಕ:16.08.2022ರ ಆಡಳಿತ ಮಂಡಳಿ ಸಭೆಯ ನಿರ್ಣಯದ ಮೇಲೆ ಯಾವುದೇ ಕ್ರಮವಾಗಿರುವುದಿಲ್ಲ.

ನಂತರ, ಈ ವಿಷಯವನ್ನು, ದಿನಾಂಕ 12.07.2023 ರಂದು ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿ, "...ನಿಯಮಾನುಸಾರ ಸದರಿ ವೈದ್ಯರ ಸೇವಾ ಜೇಷ್ಠತೆಯನ್ನು ವಿಲೀನಾತಿ (Absorption) ಹೊಂದಿದ ದಿನಾಂಕದಿಂದ Retrospective ಆಗಿ ಪರಿಗಣಿಸಲು ಅವಕಾಶ ಇಲ್ಲದೇ ಇರುವುದರಿಂದ, ಈ ಬಗ್ಗೆ ಅಸ್ತಿತ್ವದಲ್ಲಿರುವ ನಿಯಮಗಳ (Exiting Rules) ಪ್ರಕಾರ ಕ್ರಮ ವಹಿಸುವ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಈ ಹಿಂದಿನ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಅನುಸಾರ ಸದರಿ ವೈದ್ಯರ ವಿಲೀನಾತಿಯನ್ನು (Absorption) ಮಾಡುವ ಕುರಿತು ಪ್ರಕರಣದ ಸಮಗ್ರ ಅಂಶಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು, ಅದರಂತೆ, ಕ್ರಮ ವಹಿಸಲು ಸೂಚಿಸಲಾಯಿತು".

ಅದರಂತೆ, ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಿ, ಕಡತವನ್ನು ಆ ಇಲಾಖೆಗೆ ಕಳುಹಿಸಲಾಗಿತ್ತು. ಈ ಮಧ್ಯೆ, ರಿಟ್ ಅರ್ಜಿ ಸಂಖ್ಯೆ:23876/2022ರಲ್ಲಿ ಗೌ. ನ್ಯಾಯಾಲಯವು ದಿನಾಂಕ:08.08.2023 ರಂದು ಅಂತಿಮ ಆದೇಶ ನೀಡಿದ್ದು, ಆದೇಶದ ಉದ್ಧೃತ ಭಾಗ ಈ ಕೆಳಗಿನಂತಿದೆ.

**ORDER**

8. As could be seen from the above, even though respondent No.4 was on deputation, she has nevertheless been granted seniority above the petitioner, as if she was borne on the cadre of Assistant Professor.

9. It is also stated that by virtue of the order passed by the Division Bench, the order of absorption made in favour of respondent No.4 was cancelled and she, therefore, continued to be an employee of the Health and Family Welfare Department on deputation to the respondent No.2/Institution.

10. It is inconceivable that an employee who was deputed to another organization can claim seniority as against a person borne on a regular cadre. In the instant case, admittedly, the petitioner has been absorbed and is thus, in the cadre of respondent No.2/Institution and respondent No.2 could not, therefore, have assigned seniority of an employee who was on deputation above her.

11. In this view of the matter, the impugned order is quashed. As a consequence, the consequential communication of the Institute to the State in respect of the decision taken on subject No.5, item No.4 shall also stand quashed.

12. The learned counsel appearing for the petitioner submits that during the pendency of this litigation, petitioner's promotion to the post of * Professor has been withheld. He also produced a copy of the endorsement dated 31.07.2023.

13. In view of the fact that the petitioner is an employee, who has been absorbed in respondent No.2 / Institution, respondent No.2 would have to consider the case of the petitioner for promotion, if he is so eligible, in accordance with law at the earliest and at any rate, within three months from the date of receipt of a copy of this order.

14. It is needless to state that this order would not come in the way of respondent No.4 to initiate appropriate proceedings to address her grievance regarding absorption, in the manner known to law.

15. The writ petition is accordingly allowed.

ಕಾನೂನು ಇಲಾಖೆಯು ಈ ಮೇಲಿನ ಆದೇಶವನ್ನೊಳಗೊಂಡಂತೆ, ಕಡತವನ್ನು ಪರಿಶೀಲಿಸಿ, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತದೆ;

- ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:23876/2022ರಲ್ಲಿ ದಿನಾಂಕ:08-08-2023 ರಂದು ನೀಡಿರುವ ಆದೇಶದಂತೆ, ರಿಟ್ ಅಪೀಲ್ ಸಂಖ್ಯೆ:81/2020ರ ತೀರ್ಪು ದಿನಾಂಕ:28-02-2018ರಂದು ವಿಭಾಗೀಯ ಪೀಠವು ನೀಡಿರುವ ಆದೇಶದ ಮೇರೆಗೆ ಡಾ. ಲೀಲಾವತಿ.ವಿ ಇವರ ಪರವಾಗಿ ಮಾಡಲಾಗಿದ್ದ, ದಿನಾಂಕ:08.02.2018ರ ವಿಲೀನಾತಿ ಆದೇಶವನ್ನು ರದ್ದುಗೊಳಿಸಲಾಗಿದ್ದು ಹಾಗೂ ಸದರಿಯವರನ್ನು ಮುಂದುವರೆಸಿದ್ದರು ನಿಯೋಜನೆ ಮೇಲೆಯೇ ಇರಬೇಕಾಗುತ್ತದೆ ಹೊರತು ಪ್ರತಿವಾದಿ 2 ಸಂಸ್ಥೆಯ ವೃಂದದಲ್ಲಿ ಅಲ್ಲ ಎಂದು ಆದೇಶಿಸಿರುತ್ತದೆ. ಸದರಿ ತೀರ್ಪಿನ ಕಂಡಿಕೆ-9ರಲ್ಲಿ ಮಾನ್ಯ ನ್ಯಾಯಾಲಯವು ವಿಭಾಗೀಯ ಪೀಠದ ಆದೇಶದನ್ವಯ ಪ್ರತಿವಾದಿ-4ರ ಪರವಾಗಿ ಮಾಡಲಾದ ವಿಲೀನಾತಿ ಆದೇಶವನ್ನು ರದ್ದು ಮಾಡಲಾಗಿದೆ ಮತ್ತು ಸದರಿ ನೌಕರರು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೌಕರರಾಗಿ ಮುಂದುವರೆಯಬೇಕಾಗುತ್ತದೆ ಎಂದು ತಿಳಿಸಿರುವುದು ಕಂಡುಬರುತ್ತದೆ.

- ಮುಂದುವರೆದು, ಡಾ:ಲೀಲಾವತಿ ವಿ ಇವರನ್ನು ವಿಲೀನಾತಿಗೊಳಿಸಿರುವ ಸರ್ಕಾರದ ಆದೇಶ ಸಂಖ್ಯೆ:ಆಕುಕ 50 ಎಂಎಸ್ಎಫ್ 2017, ದಿನಾಂಕ:08.08.2018ರ ಆದೇಶವನ್ನು ಮಾನ್ಯ ಉಚ್ಛ

ನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ:81/2020 ದಿನಾಂಕ:28.02.2020ರ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:23876/2022ರ ದಿನಾಂಕ:08.08.2023ರ ಆದೇಶದಲ್ಲಿಯೂ ಸಹ ಸದರಿಯವರು ವಿಲೀನಾತಿ ಆದೇಶವನ್ನು ರದ್ದುಗೊಳಿಸಿರುವ ಕಾರಣ, ಡಾ:ಲೀಲಾವತಿ ವಿ ರವರು ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ರಲ್ಲಿ ಕೇವಲ ನಿಯೋಜನೆ ಮೇರೆಗೆ ಮುಂದುವರೆಯ ಬೇಕಾಗುತ್ತದೆ.

- ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶ ದಿನಾಂಕ:28.02.2020 ಮತ್ತು 08.08.2023ರ ಆದೇಶದಲ್ಲಿಯು ಸಹ ಸದರಿಯವರು ಸರ್ಕಾರಿ ಆದೇಶ ಸಂಖ್ಯೆ: ಆಕುಕ 50 ಎಂಎಸ್ಎಫ್ 2017, ದಿನಾಂಕ:08.02.2018ರ ವಿಲೀನಾತಿಗೊಳಿಸಿರುವ ಆದೇಶವು ರದ್ದುಗೊಂಡಿರುವ ಕಾರಣ ಇವರ ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೌಕರರಾಗಿ ಮುಂದುವರೆಯಬೇಕಾಗಿರುತ್ತದೆ ಹಾಗೂ ಜೇಷ್ಠತೆಯ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿಯೇ ಕೋರಬಹುದಾಗಿರುತ್ತದೆ ಹೊರತು ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಕೇವಲ ನಿಯೋಜನೆ ಮೇರೆಗೆ ಮುಂದುವರೆಯುತ್ತಿರುವ ಕಾರಣ ಸದರಿ ಸಂಸ್ಥೆಯ ಜೇಷ್ಠತಾ ಪಟ್ಟಿಯಲ್ಲಿ ಡಾ.ಲೀಲಾವತಿ.ವಿ ಇವರನ್ನು ಪರಿಗಣಿಸಲು ಬರುವುದಿಲ್ಲ ಹಾಗೂ ಸದರಿಯವರನ್ನು ಹೊಸದಾಗಿ ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ವಿಲೀನಾತಿಗೊಳಿಸುವ ಬಗ್ಗೆ ಆಡಳಿತ ಇಲಾಖೆಯು ನಿಯಮಾನುಸಾರ ತಮ್ಮ ಹಂತದಲ್ಲಿಯೇ ನಿರ್ಣಯ ಕೈಗೊಳ್ಳಬಹುದಾಗಿದೆ ಎಂಬುವುದು ಕಾನೂನು ಇಲಾಖೆಯ ಅಭಿಪ್ರಾಯವಾಗಿರುತ್ತದೆ.

ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯದನ್ವಯ ಕ್ರಮವಹಿಸುವ ನಿಟ್ಟಿನಲ್ಲಿ ಮೊದಲಿಗೆ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ, ನಿಯಮಾನುಸಾರ ಕೂಡಲೇ ನಿರ್ಣಯ ಕೈಗೊಳ್ಳಲು ಸಂಸ್ಥೆಯ ನಿರ್ದೇಶಕರಿಗೆ ದಿನಾಂಕ:10.11.2023ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಸಂಖ್ಯೆ: ಎಂಇಡಿ 594 ಎಂಎಸ್ಎಫ್ 2023

**(ಡಾ. ಶರಣಪ್ರಕಾಶ್ ಆರ್ ಪಾಟೀಲ್)**
ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು